ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/01/ಸೇಮನ/2019-20

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 21/08/2019.

ಸುತ್ತೋಲೆ

ವಿಷಯ: ಸರ್ಕಾರಿ ಕಾಲೇಜುಗಳ ಬೋಧಕ ಸಿಬ್ಬಂದಿಗಳ ಸೇವಾ ಪುಸ್ತಕಗಳಲ್ಲಿ ನಮೂದು ಮಾಡುವ ಕುರಿತು.

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ವರ್ಗದವರ ಸೇವಾ ಪುಸ್ತಕದಲ್ಲಿ ವಾರ್ಷಿಕ ವೇತನ, ಪಿಹೆಚ್.ಡಿ ವ್ಯಾಸಂಗದ, ವೇತನ ಪರಿಷ್ಕರಣೆ, ಅನುಪಾತಗಳಿಕೆ ರಜೆ, ಹೆರಿಗೆ ರಜೆ ಪುನರ್ ಮನನ ತರಬೇತಿ ಹಾಗೂ ಇತ್ಯಾದಿಗಳ ಮಾಹಿತಿಯನ್ನು ನಮೂದಿಸುವಂತೆ ಕೆಲವೊಂದು ಕಾಲೇಜುಗಳ ಪ್ರಾಂಶುಪಾಲರುಗಳಿಂದ ಕೇಂದ್ರ ಕಛೇರಿಗೆ ಪತ್ರಗಳು ಬರುತ್ತಿರುವುದು ಕಂಡು ಬಂದಿದೆ. ಕೇಂದ್ರ ಕಛೇರಿಯಲ್ಲಿ ಸೇವಾ ಪುಸ್ತಕಗಳ ಸಂರಕ್ಷಣೆ ಮಾತ್ರ ಮಾಡಲಾಗುತ್ತಿದ್ದು, ಸೇವಾ ಪುಸ್ತಕದಲ್ಲಿ ನಮೂದಿಸಲು ಅವಕಾಶವಿರುವುದಿಲ್ಲ. ಆದುದರಿಂದ, ಇನ್ನು ಮುಂದೆ ಸಂಬಂಧಪಟ್ಟ ಬೋಧಕ ವರ್ಗದವರ ಮೇಲ್ಕಂಡ ಮಾಹಿತಿಯನ್ನು ಆಯಾಯ ಕಾಲೇಜಿನ ಪ್ರಾಂಶುಪಾಲರು ಸೇವಾ ಪುಸ್ತಕವನ್ನು ಕೇಂದ್ರ ಕಛೇರಿಯಿಂದ ಪಡೆದು ನಮೂದಿಸಿ ಹಿಂದಿರುಗಿಸುವಂತೆ ಹಾಗೂ ಇನ್ನು ಮುಂದೆ ಇಂತಹ ಪತ್ರಗಳನ್ನು ಕೇಂದ್ರ ಕಛೇರಿಗೆ ಕಳುಹಿಸಿಕೊಡಬಾರದೆಂದು ತಮ್ಮ ಕಛೇರಿ ವ್ಯಾಪ್ತಿಯ ಪ್ರಾಂಶುಪಾಲರುಗಳಿಗೆ ತಿಳಿಸುವಂತೆ ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1) ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಕಲಬುರಗಿ – ಸೂಕ್ತ ಕ್ರಮಕ್ಕಾಗಿ.
2) ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು – ಸೂಕ್ತ ಕ್ರಮಕ್ಕಾಗಿ.
3) ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು – ಇವರ ಅಗತ್ಯ ಕ್ರಮಕ್ಕಾಗಿ
4) ಕಛೇರಿ ಪ್ರತಿ.